## ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 599 / 2016

**ಚಾಸಾ ಃ- 08 / ಪ್ರಾಸಾ ಃ- 04**

| | |
|---|---|
| ಹೆಸರು | ಮಹದೇವಯ್ಯ |
| ತಂದೆ ಹೆಸರು | ವೀರಭದ್ರಯ್ಯ |
| ವಯಸ್ಸು | 70 |
| ಉದ್ಯೋಗ | ವ್ಯವಸಾಯ |
| ವಿಳಾಸ | ಹಲಸಬೆಲೆ |

**ದಿನಾಂಕಃ 26-06-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ. ಈಗ ಸಾಕ್ಷಿಗೆ ನಿ ಪಿ-2 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ವಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 31.07.2014 ರಂದು ನಿಮ್ಮ , ಚಾಸಾ 1 ಮತ್ತು ಚಾಸಾ 9 ರವರ ಸಮಕ್ಷಮ ಬೆಳಿಗ್ಗೆ 7.30 ರಿಂದ 8.00 ಗಂಟೆಯವರೆಗೆ ಮಾಗಡಿ ಪೋಲಿಸ್ ಠಾಣೆಯ ಮುಂಭಾಗ ಕೆಎ 51- 6673 ವಾಹನವನ್ನು ಜಪ್ತಿ ಪಡಿಸಿಕೊಂಡು ಹಾಗೂ ಸದರಿ ವಾಹನದಲ್ಲಿ ಇದ್ದ ಪೂಜಾ ಸಾಮಗ್ರಿಗಳು ಮತ್ತು ಸುತ್ತಿಗೆ ಹಾಗೂ ಸ್ಥಳ ಪುರಾಣಗಳ ಪುಸ್ತಕಗಳನ್ನು ಜಪ್ತಿ ಪಡಿಸಿಕೊಂಡು ಅಮಾನತು ಪಂಚನಾಮೆಯನ್ನು ಜರುಗಿಸಿರುತ್ತಾರೆ

ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈ ಪ್ರಕಣದ ಬಗ್ಗೆ ಎಲ್ಲಾ ಮಾಹಿತಿ ಗೊತ್ತಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ- ಶ್ರೀ. ಎಲ್ ಪಿ ಎಸ್ ವಕೀಲರಿಂದ**

ಆರೋಪಿ ಪರ ವಕೀಲರು ಪಾಟೀಸವಾಲುಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**

## ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 599 / 2016

**ಚಾಸಾ ಃ- 02 / ಪ್ರಾಸಾ ಃ- 03**

| | |
|---|---|
| ಹೆಸರು | ಮಹದೇವಯ್ಯ |
| ತಂದೆ ಹೆಸರು | ಚನ್ನಬಸವಯ್ಯ |
| ವಯಸ್ಸು | 73 |
| ಉದ್ಯೋಗ | ವ್ಯವಸಾಯ |
| ವಿಳಾಸ | ಅಲಸಬೆಲೆ |

**ದಿನಾಂಕಃ 26-06-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ 1 ಮತ್ತು 3 ರಿಂದ 6 ರವರು ಪರಿಚಯ ಇರುತ್ತಾರೆ. 1 , 3 , ಮತ್ತು 4 ನೇ ಆರೋಪಿತರ ಪರಿಚಯ ಇದೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ವಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 30.07.2014 ರಂದು ರಾತ್ರಿ 11.30 ಗಂಟೆ ಸಮಯದಲ್ಲಿ ಚಾಸ 1 ರವರು ನಿಮಗೆ ಪೋನ್ ಮಾಡಿ ನಾನು ಜಮೀನಿನಲ್ಲಿ ನೀರನ್ನು ಕಟ್ಟುತ್ತಿದ್ದಾಗ ಬಸವನಗುಡಿಪಾಳ್ಯ ಮತ್ತು ಹಲಸಬೆಲೆ ಗ್ರಾಮದ ರಸ್ತೆಯಲ್ಲಿ ದೇವಸ್ಥಾನದ ಹತ್ತಿರ ಒಂದು ಟಾಟಾಸುಮೋ ಬಂದು ನಿಂತಿದ್ದು ಅದರಲ್ಲಿ ಸುಮಾರು ಜನರು ಅದರಿಂದ ಕೆಳಗೆ ಇಳಿದು ದೇವಸ್ಥಾನದ ಹಿಂಭಾಗದಲ್ಲಿ ಗರ್ಭಗುಡಿಯಲ್ಲಿ ಇದ್ದ ಬಸವಣ್ಣ ದೇವರ ವಿಗ್ರಹವನ್ನು ನಮ್ಮ ಗ್ರಾಮದ ಶಿವರುದ್ರಯ್ಯರವರ ಜಮೀನಿನಲ್ಲಿ ತೆಗೆದುಕೊಂಡು ಹೋಗಿ ಸುತ್ತಿಗೆಯಿಂದ ಹೊಡೆಯುತ್ತಿದ್ದಾರೆ ಬೇಗ ಜೊತೆಯಲ್ಲಿ ಜನರನ್ನು ಕರೆದುಕೊಂಡು ಬಾ

ಎಂದು ಹೇಳಿದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ನಿಮ್ಮ ಗ್ರಾಮದ ನಂದೀಶ, ಮಹೇಶ, ಚಂದ್ರಯ್ಯ ಮತ್ತು ನಾಗರಾಜು ಹಾಗೂ ನೀವು ದೇವಸ್ಥಾನದ ಕಡೆಗೆ ಹೊರಟಾಗ ಚಾಸಾ 1 ರವರು ಪೋನ್ ಮಾಡಿ ನನ್ನನ್ನು ನೋಡಿ ಸುಮೋ ಹತ್ತಿ ವಾಪಸ್ಸು ಆ ಕಡೆ ಬರುತ್ತಿದ್ದಾರೆ ಎಂದು ಹೇಳಿದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ತಕ್ಷಣ ನೀವು ನಿಮ್ಮ ಗ್ರಾಮದ ಗೇಟ್ ಬಳಿ ರಸ್ತೆಗೆ ಅಡ್ಡಲಾಗಿ ಮರವನ್ನು ಇಟ್ಟು ಸುಮೋವನ್ನು ಅಡ್ಡಹಾಕಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿಯವರನ್ನು ವಿಚಾರ ಮಾಡಲಾಗಿ ಅದರಲ್ಲಿ ಬಸವಣಗುಡಿಪಾಳ್ಯ ವಾಸಿ ಶಿವರುದ್ರಯ್ಯ, ಮತ್ತು ಅದೇ ಗ್ರಾಮದ ರುದ್ರೇಶ್ ಅಲಿಯಾಸ್ ರವಿ ಮತ್ತು ಜಿ ಬಿ ರವಿಕುಮಾರ್ ಹಾಗೂ ಇತರೆ 5 ಜನ ಅಪರಿಚಿತರು ಇದ್ದರು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಅವರನ್ನು ಹಿಡಿದು ವಿಚಾರಣೆ ಮಾಡಿದಾಗ ಹಿಡಿದುಕೊಂಡಿದ್ದ ವ್ಯಕ್ತಿಯ ಹೆಸರು ಕೃಷ್ಣ, ಅಂಜನಾಪುರದ ವಾಸಿ ಎಂದು ತಿಳಿಸಿರುತ್ತಾನೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅವರು ಬಂದಿದ್ದ ಟಾಟಾಸುಮೋವನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ ಒಂದು ಸುತ್ತಿಗೆ ಮತ್ತು ಪೂಜಾಸಾಮಗ್ರಿಗಳು ಇರುವುದು ಕಂಡು ಬಂದಿರುತ್ತದೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅವರು ಬಂದಿದ್ದ ಟಾಟಾಸುಮೋ ನಂಬರ್ ಅನ್ನು ನೋಡಲಾಗಿ ಕೆಎ 51-6673 ಆಗಿತ್ತು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ದಿನಾಂಕ 17.02.2013 ರಂದು ಬಸವಣ್ಣನ ದೇವರ ವಿಗ್ರಹವನ್ನು ಇವರೇ ಭಗ್ನ ಗೊಳಿಸಲು ಪ್ರಯತ್ನಿಸಿರಬಹುದು ಎಂದು ಗೊತ್ತಯಿತು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ದಿನಾಂಕ 31.07.2014 ರಂದು ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು. ಈ ಪ್ರಕಣದ ಬಗ್ಗೆ ಎಲ್ಲಾ ಮಾಹಿತಿ ಗೊತ್ತಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ- ಶ್ರೀ. ಎಲ್ ಪಿ ಎಸ್ ವಕೀಲರಿಂದ**

ಆರೋಪಿ ಪರ ವಕೀಲರು ಪಾಟೀಸವಾಲುಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ . ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**